ದಾರಿಯೇ ಮುಖ್ಯ ಎಂಬ ಗುಟ್ಟನ್ನು ಅವರೇನು ಬಲ್ಲರು? ಹಿಡಿದದಾರಿ ಗುರಿಯನ್ನೂ ಬದಲಿಸಬಲ್ಲದು. ದಾರಿತಪ್ಪಿ ಅಂಡಲೆವಾಗಲಂತೂ ತಲುಪುವ ಗುರಿಗಳು ಊಹಾತೀತ. ನಾನು ಲಗ್ನವಾಗಿದ್ದು, ಅಧ್ಯಾಪಕನಾಗಿದ್ದು, ಲೇಖಕನಾಗಿದ್ದು ಎಲ್ಲವೂ ಹೀಗೆ ತಾನೇ? ಅತಿಕ್ರಮ ಪ್ರವೇಶ, ಅಡ್ನಾಡಿತನ ನನಗಂತೂ ಸತ್ಫಲಗಳನ್ನೇ ನೀಡಿದೆ.

ಮನೆಯಲ್ಲಿ ತಕ್ಕ ಸ್ಥಾನವಿಲ್ಲದೆ ಬಳಲುವ ಬೇನೆಯುಳ್ಳವರಿಗೆ ಕಾರ್ಯಕ್ರಮಗಳಲ್ಲಿ ಸಿಗುವ ತಾತ್ಕಾಲಿಕ ಗೌರವಗಳು ಭಾಷಣಕ್ಕೆ ಪ್ರಚೋದಿಸುತ್ತವೆ. ಕಾಲೇಜ್ ಡೇ ಅತಿಥಿಯಾಗಿ ಹೋದಾಗಲಂತೂ ಹೇಳಬಾರದು: ರಂಗೋಲಿ ಹೊಯ್ದು ಕಾಯುತ್ತಿರುವ ಬಾಲೆಯರು ಹಣೆಗೆ ತಿಲಕವಿಟ್ಟು ಮಂಗಳಾರತಿ ಎತ್ತುವರು; ಗುಲಾಬಿ ಪಕಳೆಗಳನ್ನು ತಲೆಯ ಮೇಲೆ ಸುರಿಯುವರು; ಎನ್‌ಸಿಸಿಯವರು ಎರಡೂ ಬದಿ ನಿಂತು ವಾದ್ಯ ನುಡಿಸುವರು; ಅಥಣಿ ಸೀಮೆಯ ಕಬ್ಬಿನಂತೆ ಬೆಳೆದ ಹುಡುಗನೊಬ್ಬ, ಸೆಟೆದ ಕೈಕಾಲುಗಳ ನಡಿಗೆಯಲ್ಲಿ ಪ್ರಿನ್ಸಿಪಾಲರ ಚೇಂಬರ್ ತನಕ ಬಂದು, ಬೂಟುಗಾಲನ್ನು ಟಕ್ಕನೆ ಜೋಡಿಸಿ ಹಣೆಗೆ ಕೈಯಿಟ್ಟು ಸೆಲ್ಯೂಟ್ ಹೊಡೆಯುವನು; ಅಧ್ಯಾಪಕರು ಎದ್ದು ಸಾಲಗಿ ನಿಂತು ಪರಿಚಯಿಸಿಕೊಳ್ಳುವರು; ಪ್ರಿನ್ಸಿಪಾಲರು ಛೇಂಬರಿನ ಗೋಡೆ ಮೇಲೆ ಪಟಗಳಾಗಿ ನೆಲೆಸಿರುವ, ಹಣೆತುಂಬ ವಿಭೂತಿ ಧರಿಸಿ ದಪ್ಪನೆಯ ಪಗಡಿ ಸುತ್ತಿ ಕಲ್ಲಿಮೀಸೆಬಿಟ್ಟು ನಗುತ್ತಿರುವ ದಿವಂಗತರ ಚರಿತ್ರೆಯನ್ನು ವಿವರಿಸುವರು; ಹಿಂದುಳಿದ ಪ್ರದೇಶದಲ್ಲಿ ಸಾವಿರ ರೂಪಾಯಿ ದೇಣಿಗೆಯೊಂದಿಗೆ ಹೇಗೆ ಸಂಸ್ಥೆ ಶುರುವಾಯಿತು, ಧಾರವಾಡದಲ್ಲಿ ಗೋಕಾಕರು ಪಾಠಮಾಡುತ್ತಿದ್ದ ದಿನಗಳು ಎಷ್ಟು ಸುಂದರವಾಗಿದ್ದವು, ಸಹಪಾಠಿಗಳು ಯಾವೆಲ್ಲ ದೇಶಗಳಲ್ಲಿದ್ದಾರೆ, ಮಣ್ಣಿನಮಗನಾದ ತಮ್ಮನ್ನೇಕೆ ಊರು ಹಿಡಿದಿಟ್ಟುಕೊಂಡಿದೆ, ಕಾಲೇಜಿಗೆ ಯಾರೆಲ್ಲ ಗಣ್ಯ ಸಾಹಿತಿಗಳು ಬಂದಿದ್ದರು ಎಂಬುದನ್ನು ಚಕಚಕ ಒಪ್ಪಿಸುವರು. ಬೇಡವೆಂದರೂ ಎಳೆದೊಯ್ದು ಸಜ್ಜಿತ ಗ್ರಂಥಾಲಯ, ಕೆಮಿಸ್ಟ್ರಿ ಲ್ಯಾಬು, ಅದರೊಳಗಿನ ಬಣ್ಣದ ದ್ರವ, ಬಹುಶಃ ಭಾಷಣ ಮಾಡುತ್ತ ಊರೂರು ಅಲೆಯುವಾಗ ಬೀದಿಹೆಣವಾದ ವ್ಯಕ್ತಿಯದಿರಬೇಕು. ಒಂದು ಅಸ್ಥಿಪಂಜರ, ಒಂದು ಕಾಲಕ್ಕೆ ಸ್ವತಂತ್ರವಾಗಿ ಓಡಾಡಿಕೊಂಡಿದ್ದು ಈಗ ದ್ರಾವಣ ತುಂಬಿದ ಗಾಜಿನ ಜಾಡಿಯಲ್ಲಿ ಸಿಂಬೆಸುತ್ತಿ ಮಲಗಿರುವ ಹಾವು ತೋರಿಸುವರು. ಆಗೆಲ್ಲ ತೃಣಸಮಾನವಾಗಿ ನೋಡುವ ಹೆಂಡತಿ–ಮಕ್ಕಳು ಸಾರ್ವಜನಿಕವಾಗಿ ನನಗಿರುವ ಮರ್ಯಾದೆ ನೋಡಲು ಇರಬೇಕಿತ್ತು ಎಂದು ಜೀವ ಹುರುಹುರು ಮಾಡುತ್ತದೆ.

ಭಾಷಣ ಪೂರ್ವದಲ್ಲಿ ಸಿಗುವ ಈ ಮರ್ಯಾದೆ ಭಾಷಣಾ ನಂತರ ಮಂಜಿನಂತೆ, ಕಾಮನಬಿಲ್ಲಿನಂತೆ, ನೀರ್ಗುಳ್ಳೆಯಂತೆ, ಮಿಂಚಿನಂತೆ ಕಣ್ಮರೆಯಾಗುತ್ತದೆ. ನನ್ನ ಅನುಭವದ ಗೋದಾಮಿನಲ್ಲಿ ಭಾಷಣಗಳಿಂದ ಸಿಕ್ಕ ಜಯಪತ್ರಗಳಿಗಿಂತ ಸೋಲಿನ ಸರ್ಟಿಫಿಕೇಟುಗಳೇ ಜಾಸ್ತಿ. ಅದರಲ್ಲೂ ಕಾಲೇಜ್ ಡೇ, ನನ್ನನ್ನು ಒಂದೇ ಪೇಚಿಗೆ ಚಿತ್ತಾಗಿಸುವ ಅಖಾಡಾ. ಅಲ್ಲಿ ಭಾಷಣ ಕೇಳುವ ವ್ಯವಧಾನ ಯಾರಿಗೂ ಇರುವುದಿಲ್ಲ. ವಿದ್ಯಾರ್ಥಿಗಳಿಗೆ ಅದು ಪ್ರೀತಿಪಾತ್ರರಿಗೆ ವಿದಾಯ ಹೇಳುವ, ಆಟೊಗ್ರಾಫ್ ಹಾಕಿಸಿಕೊಳ್ಳುವ, ವ್ಯಕ್ತಮಾಡಲಾಗದೆ ಅದುಮಿಟ್ಟ ಭಾವನೆಗಳನ್ನು ಹೊರಹಾಕುವ, ಹುಡುಗಿಯರೆದುರು ಅಪಮಾನಿಸಿದ್ದ ಅಧ್ಯಾಪಕರ ಮೇಲೆ ಮುಯ್ಯಿ ತೀರಿಸಿಕೊಳ್ಳುವ ಹೊನ್ನವಕಾಶ. ಅಧ್ಯಾಪಕರಾದರೂ ತಾವೇ ಕೊಬ್ಬಿಸಿ ಬೆಳೆಸಿದ, ಈಗ ಈಟಿಯಿಂದ ಇರಿದು ರೊಚ್ಚಿಗೆಬ್ಬಿಸಿದ ಗೂಳಿಗಳ ಅಂಕಣಕ್ಕೆ ಬಡಪಾಯಿಗಳಾದ ನಮ್ಮನ್ನು ತಳ್ಳಿ ತಮಾಶೆ ನೋಡುವರು. ಕಡೇಸಾಲಿನ ಧಾಂಡಿಗರು ತಮ್ಮ ಪ್ರೇಮಪತ್ರಕ್ಕೆ ಸೊಪ್ಪುಹಾಕದ